# Government of Karnataka

## Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 925/2025

ಸಿ ಡಬ್ಲ್ಯೂ-1
ಪಿ ಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ಪಾರ್ವತಿ @ ಲಲಿತಾ |
| ಗಂಡನ ಹೆಸರು | ಃ- | ಮಂಜುನಾಥ |
| ವಯಸ್ಸು | ಃ- | 30 ವರ್ಷ |
| ಉದ್ಯೋಗ | ಃ- | ಮನಗೆಲಸ |
| ವಾಸಸ್ಥಳ | ಃ- | ದಾಸನಾಳ ತಾಃ ಗಂಗಾವತಿ. |

**ದಿ.27-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-4 ನನ್ನ ತಾಯಿ. ಚಾ.ಸಾ-5 ಮತ್ತು 6 ನನ್ನ ಅಣ್ಣಂದಿರು. ಚಾ.ಸಾ-7 ನನ್ನ ದೊಡ್ಡಮ್ಮ. ಚಾ.ಸಾ-8 ನನ್ನ ದೊಡ್ಡಮ್ಮನ ಮಗ. ಚಾ.ಸಾ-9 ನನ್ನ ಭಾವ. ಚಾ.ಸಾ-10 ಪೂಜಾರಿ. 1ನೇ ಆರೋಪಿ ನನ್ನ ಗಂಡ. 2ನೇ ಆರೋಪಿ ನನ್ನ ಮೈದುನ.

ನನ್ನ ಮದುವೆ ದಿನಾಂಕ 12-02-2018 ರಂದು 1ನೇ ಆರೋಪಿಯೊಂದಿಗೆ ಸಿ.ಬಿ.ಎಸ್ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. ಮದುವೆ ಮಾತುಕತೆ ನಮ್ಮ ತವರು ಮನೆಯಲ್ಲಿ ಆಗಿರುತ್ತದೆ. ಮಾತುಕತೆಯಲ್ಲಿ ನಮ್ಮ ತಂದೆ-ತಾಯಿ, ಚಾ.ಸಾ-4, 5, 7, 8, 9 ರವರು ನಮ್ಮ ಕಡೆಯಿಂದ ಇದ್ದರು. ನನ್ನ ಗಂಡನ ಕಡೆಯಿಂದ ಅತ್ತೆ ಗಿರಿಜಮ್ಮ, ನನ್ನ ಗಂಡ ಮತ್ತು ಮೈದುನ ಇದ್ದರು. ಮಾತುಕತೆಯಲ್ಲಿ 3 ತೊಲೆ ಬಂಗಾರದ ಚೈನು ಕೊಡುವಂತೆ ಮಾತುಕತೆಯಾಗಿತ್ತು. ಮಾತುಕತೆಯಂತೆ ನಮ್ಮ ತಂದೆ-ತಾಯಿ ಬಂಗಾರದ ಚೈನು ಹಾಕಿ ಮದುವೆ ಮಾಡಿರುತ್ತಾರೆ. ಮದುವೆಯಾದ ನಂತರ ನಾನು ಲಿಂಗಸುಗೂರಿನ ನನ್ನ ಗಂಡನ ಮನೆಗೆ ಬಂದಿರುತ್ತೇನೆ. 6 ತಿಂಗಳವರೆಗೆ ಚೆನ್ನಾಗಿ ಸಂಸಾರ ಮಾಡಿರುತ್ತೇವೆ. ನಮಗೆ ಇಬ್ಬರು ಗಂಡು ಮಕ್ಕಳು ಇದ್ದು ಅವರು ಜೈಸೀತ್ ಮತ್ತು ಭವಿತ್ ಇರುತ್ತಾರೆ. ನನ್ನ ಗಂಡ ಲಿಂಗಸುಗೂರಿನಲ್ಲಿ ಕಟಿಂಗ್ ಶಾಪ್ ಅಂಗಡಿ ನಡೆಸುತ್ತಿದ್ದಾರೆ. ನಂತರದ ದಿನಗಳಲ್ಲಿ 1ನೇ ಆರೋಪಿ ಕುಡಿತದ ಚಟಕ್ಕೆ ದಾಸನಾಗಿ ಮನೆಯಲ್ಲಿ ಸಣ್ಣ-ಪುಟ್ಟ ವಿಷಯಕ್ಕೆ ಜಗಳ ತೆಗೆದು ನಿನಗೆ ಅಡುಗೆ ಸರಿಯಾಗಿ ಮಾಡಲು ಬರುವದಿಲ್ಲ ಎಂದು ಹೇಳಿ ಮಾನಸಿಕವಾಗಿ ಕಿರುಕುಳ ಕೊಟ್ಟಿರುತ್ತಾನೆ. ಅದಾದ ಮೇಲೆ ಆರೋಪಿತರು ಲಿಂಗಸುಗೂರಿನಲ್ಲಿ ಕಟಿಂಗ್ ಶಾಪ್ ಮತ್ತು ಬೇರೆ ಬ್ಯುಜಿನೆಸ್ ಮಾಡುವದಕ್ಕೆ ಹಾಗೂ ಮದುವೆ ಸಮಯದಲ್ಲಿ ನಿನ್ನ ತವರು ಮನೆಯವರು ವರದಕ್ಷಿಣೆ ಕೊಟ್ಟಿಲ್ಲ ಎಂದು ನಮ್ಮ ತವರು ಮನೆಯಲ್ಲಿ ಚೆನ್ನಾಗಿಇದ್ದಾರೆ 30-40 ಲಕ್ಷ ಹಣ

ತೆಗೆದುಕೊಂಡು ಬಾ ಎಂದು ಮಾನಸಿಕವಾಗಿ ಕಿರುಕುಳ ಕೊಟ್ಟಿರುತ್ತಾರೆ. ಅದಕ್ಕೆ ನಾನು ನಮ್ಮ ತವರು ಮನೆಯವರು ಮದುವೆಯನ್ನು ಅದ್ದೂರಿಯಾಗಿ ಮಾಡಿ ಕೊಟ್ಟಿದ್ದಾರೆ ನಮ್ಮ ಮನೆಯಿಂದ ದುಡ್ಡು ಕೊಡಲು ಆಗುವದಿಲ್ಲ ಎಂದು ಹೇಳಿರುತ್ತೇನೆ. ನಂತರ ಆರೋಪಿತರು ಅದೇ ವಿಷಯವನ್ನು ಇಟ್ಟುಕೊಂಡು ನನಗೆ ಮಾನಸಿಕ ಕಿರುಕುಳ ಕೊಟ್ಟಿದ್ದನ್ನು ತವರು ಮನೆಯವರಿಗೆ ತಿಳಿಸಿರುತ್ತೇನೆ. ನಂತರ ನಮ್ಮ ತವರು ಮನೆಯವರು ಲಿಂಗಸುಗೂರಿಗೆ ಬಂದು ಆರೋಪಿತರಿಗೆ ಬುದ್ದಿ ಹೇಳಿ ನನಗೂ ಸಹ ಬುದ್ದಿವಾದ ಹೇಳಿರುತ್ತಾರೆ. ಅದಾದ ನಂತರ ನಾವು ಸ್ವಲ್ಪ ದಿನ ಚೆನ್ನಾಗಿ ಇದ್ದೇವು. ನಂತರ 1ನೇ ಆರೋಪಿ ಬುಜಿನೆಸ್ ಸಲುವಾಗಿ ಹಣ ತೆಗೆದುಕೊಂಡು ಬಂದಿಲ್ಲ ಎಂದು ಹೊಡೆಬಡೆ ಮಾಡಿರುತ್ತಾನೆ. ನಾನು ಅದನ್ನು ಸಹಿಸಿಕೊಂಡು ಸಂಸಾರ ಮಾಡಿರುತ್ತೇನೆ.

2. ದಿನಾಂಕ 23-03-2025 ರಂದು ಮದ್ಯಾಹ್ನ 2-30 ಕ್ಕೆ 1ನೇ ಆರೋಪಿ ಲಿಂಗಸುಗೂರಿನ ನಮ್ಮ ಮನೆಗೆ ಬಂದು ಊಟ ಮಾಡುತ್ತಿದ್ದಾಗ ಊಟ ಸರಿ ಇಲ್ಲ ಎಂದು ಸೂಳೆ ಎಂದು ನನಗೆ ಬೈದು ನಿನ್ನ ತವರು ಮನೆಯಿಂದ 30-40 ಲಕ್ಷ ತೆಗೆದುಕೊಂಡು ಬಾ ಎಂದು ಹೊಡೆಬಡೆ ಮಾಡಿರುತ್ತಾರೆ. ನಾನು ಇಲ್ಲ-ಸಲ್ಲದ ಮಾತುಗಳು ಬೇಡ ಎಂದು ಹೇಳಿದ್ದಕ್ಕೆ ನನಗೆ 1ನೇ ಆರೋಪಿ ಬೂಟು ಮತ್ತು ಬೆಲ್ಟನಿಂದ ಬಲಗಡೆ ಬುಜಕ್ಕೆ ಮತ್ತು ಕುತ್ತಿಗೆಗೆ ಹೊಡೆದು ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ಕೊಟ್ಟಿರುತ್ತಾನೆ. ಈ ವಿಷಯ ನನ್ನ ತವರು ಮನೆಗೆ ಹೇಳಿರುತ್ತೇನೆ.

3. ದಿನಾಂಕ 24-03-2025 ರಂದು ಬೆಳಿಗ್ಗೆ 11-50 ಕ್ಕೆ 1ನೇ ಆರೋಪಿ ಮನೆಗೆ ಬಂದು ಲೇ ಸೂಳೇ ಇವತ್ತು ಎರಡರಲ್ಲಿ ಒಂದು ಆಗಬೇಕು ಎಂದು ನೀನು ನಿನ್ನ ತವರು ಮನೆಯಿಂದ ನಾನು ಕೇಳಿದಷ್ಟು ಹಣ ಬೇಕು ಇಲ್ಲವೆಂದರೆ ಮನೆ ಬಿಟ್ಟು ಹೋಗಬೇಕು ಎಂದು ಬೈದಾಡಿರುತ್ತಾನೆ. ಅದಕ್ಕೆ ನಾನು ದಿನಂಪ್ರತಿ ಇದೇ ಮಾಡಲು ಆಗುವದಿಲ್ಲ ಎಂದು ನನ್ನ ತವರು ಮನೆಯವರಿಗೆ ಹೇಳುತ್ತೇನೆ ಎಂದು ಹೇಳಿದಾಗ ನನ್ನನ್ನು ಹೆದರಿಸುತ್ತಿಯಾ ಅವರನ್ನು ಕರೆಯಿಸಿ ಅವರನ್ನು ಸೇರಿಸಿ ತುಂಡು-ತುಂಡಾಗಿ ಕತ್ತರಿಸಿ ಬಿಡುತ್ತೇನೆ ಎಂದು ಬೈದು ಬೆಲ್ಟಿನಿಂದ ಬಲಗಡೆ ತಲೆಗೆ ಹೊಡೆದು ಒಳಪೆಟ್ಟು ಮಾಡಿರುತ್ತಾನೆ. ಆಗ ನಾನು ಚೀರಾಡಿ ಹೊರಗಡೆ ಬಂದಾಗ 1ನೇ ಆರೋಪಿ ಲೇ ಸೂಳೆ ನೀನು ಎಲ್ಲಿಗೆ ಹೋಗುತ್ತಿಯಾ ಹೋಗು ನೀನು ಮನೆಗೆ ಬಂದರೆ ಪೆಟ್ರೋಲ್ ಹಾಕಿ ಸುಡುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾನೆ. ನಂತರ ನನಗೆ ಗಾಯಗಳಾಗಿದ್ದರಿಂದ ಲಿಂಗಸುಗೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ನಂತರ ನಮ್ಮ ತವರು ಮನೆಯವರೊಂದಿಗೆ ವಿಚಾರ ಮಾಡಿ ಆಸ್ಪತ್ರೆಗೆ ತೋರಿಸಿಕೊಂಡು ತಡವಾಗಿ ದೂರು ಕೊಟ್ಟಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-1

ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಪೋಲಿಸರು ಪ್ರಥಮ ವರ್ತಮಾನ ವರದಿಯಲ್ಲಿ ಸಹಿ ಪಡೆದಿರುತ್ತಾರೆ. ಪ್ರಥಮ ವರ್ತಮಾನ ವರದಿಯನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು.

4. ದಿನಾಂಕ 26-03-2025 ರಂದು ಪೋಲಿಸರು ನನ್ನನ್ನು ಲಿಂಗಸುಗೂರಿನ ನನ್ನ ಗಂಡನ ಮನೆಗೆ ಕರೆಯಿಸಿ ನನಗೆ ವರದಕ್ಷಿಣೆ ಕಿರುಕುಳ ಕೊಟ್ಟ ಸ್ಥಳದಲ್ಲಿ ನಾನು ತೋರಿಸಿದ ಮೇರೆಗೆ ಚಾ.ಸಾ-2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 11-00 ರಿಂದ 12-00 ವರಗೆ ಪಂಚನಾಮೆ ಮಾಡಿ 1ನೇ ಆರೋಪಿಯ ಬಲಗಾಲಿನ ಬೂಟು ಮತ್ತು ಕಪ್ಪು ಬಣ್ಣದ ಬೆಲ್ಟ್ ಜಪ್ತಿಪಡಿಸಿಕೊಂಡು ನಮ್ಮ ಸಹಿ ಪಡೆದಿರುತ್ತಾರೆ. ಸ್ಥಳದಲ್ಲಿ ಪೋಟೋ ತೆಗೆಸಿರುತ್ತಾರೆ. ಸಾಕ್ಷಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು. ಪೋಟೋಗಳನ್ನು ನಿ.ಪಿ-4 ಮತ್ತು 5 ಎಂದು ಗುರುತಿಸಲಾಯಿತು. ಸಾಕ್ಷಿ ಬೂಟು ಮತ್ತು ಬೆಲ್ಟನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುದ್ದೇಮಾಲು-1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಎ.ಸಿ.ಪಿ ವಕೀಲರಿಂದ : -**

ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.